**ದಿನಾಂಕಃ 06-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಪಾಟೀ ಸವಾಲು ವಾದಿ ಪರ ಶ್ರೀ ಬಿ.ವಿ.ಪಿ. ವಕೀಲರಿಂದಃ**

1. ರಾಜೇಸಾಬ ನನಗೆ ಚಿಕ್ಕಪ್ಪನಾಗಬೇಕು. ಸದರಿ ರಾಜೇಸಾಬ ನನ್ನ ಅಜ್ಜ ಮತ್ತು ರಾಜೇಸಾಬ ಅಜ್ಜ ಅಣ್ಣ-ತಮ್ಮಂದಿರು ಆಗಬೇಕು. O.S.No.27/1977 ದಾವೆಯು ನನ್ನ ಅಜ್ಜ ಹಾಗೂ ರಾಜೇಸಾಬ ಅಜ್ಜನ ನಡುವೆ ದಾವೆ ನಡೆದಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂ.46, 44, 25, 286, 289 ದಾವೆಯಲ್ಲಿ ಸೇರಿಸಲಾಗಿರುತ್ತವೆ ಎಂದರೆ ಸರಿ. EP No.292/1986 ಜಾರಿ ಅರ್ಜಿ ಸಲ್ಲಿದ್ದು, ಸದರಿ ಜಾರಿ ಅರ್ಜಿಯಲ್ಲಿ ವಿಭಾಗವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಾರಿ ಅರ್ಜಿಯಲ್ಲಿ ನಮಗೆ ಹಾಗೂ ರಾಜೇಸಾಬ ಕುಟುಂಬಕ್ಕೆ ಅರ್ಧ ಅರ್ಧ ಹಿಸ್ಸೆ ಬಂದಿರುತ್ತದೆ ಎಂದರೆ ಸರಿಯಲ್ಲ.

2. ವಾದಿಯು ಹಾಜರುಪಡಿಸಿದ ದಾಖಲಾತಿಯ ಬಗ್ಗೆ ತಿಳಿದುಕೊಂಡಿರುತ್ತೇನೆ. ಸದರಿ ನಮಗೆ ಪಾಲಿಗೆ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಪಾಲು ಆಗಿರುವುದಿಲ್ಲ, ಮಾರಾಟ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಖರೀದ ಪಡೆದುಕೊಂಡವರನ್ನು ಸಾಕ್ಷಿಯನ್ನಾಗಿ ಮಾಡಿಸುತ್ತೇನೆ. ಜಾರಿ ಅರ್ಜಿ ನಂ.292/1986 ರಲ್ಲಿ ಭೇಲಿಫರನ್ನು ನೇಮಿಸಿ ಸ್ವಾಧಿನ ನೀಡಿ ಆದೇಶವಾಗಿದ್ದರು ಸಹ ದಾಖಲಾತಿ ವಿರುದ್ಧ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿಯಲ್ಲಿ ಡೆಪ್ಯೂಟಿ ಕಮೀಷನವರಿಗೆ ವಿಭಾಗ ಮಾಡಿ, ವರದಿ ಸಲ್ಲಿಸಬೇಕೆಂದು ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಪಾಲಿಗೆ ಬಂದ ಆಸ್ತಿಗಳಲ್ಲಿ ನಾವು ಸ್ವಾಧಿನವಿದ್ದು, ವಾದಿಯ ಪಾಲಿಗೆ ಬಂದ ಆಸ್ತಿಗಳಲ್ಲಿ ಸ್ವಾಧಿನವಿದ್ದು, ಪಹಣಿ ಪತ್ರಿಕೆಯಲ್ಲಿ ಹೆಸರು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ.

3. ನನ್ನ ಪಾಲಿಗೆ ಬಂದ ಆಸ್ತಿಯನ್ನು ಮಾರಾಟ ಮಾಡಿ, ವಾದಿಯ ಪಾಲಿಗೆ ಬಂದ ಆಸ್ತಿಗೆ ತಕರಾರು ಮಾಡುತ್ತಿರುತ್ತೇನೆ ಎಂದರೆ ಸರಿಯಲ್ಲ. ಗೈಬೂಸಾಬ, ಮೋದಿನಸಾಬ ರವರಿಗೆ 36 ಎಕರೆ 15 ಗುಂಟೆ ಬಂದಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಖೊಟ್ಟಿ ದಾಖಲಾತಿ ಆಧಾರದ ಮೇರೆಗೆ ಡ್ಯೆರಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಹಸನಸಾಬ ಗೈಬೂಸಾಬ 5 ಎಕರೆ 25 ಗುಂಟೆ ಮತ್ತು 7

ಎಕರೆ 30 ಗುಂಟೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ EP ಅರ್ಜಿಯಲ್ಲಿ FDP ನು ದಾಖಲಿಸದೆ ಕಬ್ಜೆಯನ್ನು ಪಡೆದುಕೊಂಡಿರುತ್ತಾರೆ ಎಂದು ತಕರಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ.

4. ಸನ್ 1986 ರಿಂದ ಇಲ್ಲಿವರೆಗಿನ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇವೆ. ರಾಜೇಸಾಬನಿಗೆ ಗಂಡು ಮಕ್ಕಳು ಇಲ್ಲ ಎಂದರೆ ಸರಿ. ರಾಜೇಸಾಬರಿಗೆ ಇಬ್ಬರೂ ಹೆಣ್ಣು ಮಕ್ಕಳು ಇದ್ದು, ಅವರು ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ರಾಜೇಸಾಬನಿಗೆ ಗಂಡು ಮಕ್ಕಳು ಇಲ್ಲದ ಕಾರಣ ರಾಜೇಸಾಬನ ಹೆಣ್ಣುಮಕ್ಕಳ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಾನ್ಯ ಉಚ್ಚ ನ್ಯಾಯಾಲಯವು RSA No.9/1986 ರಲ್ಲಿ ಮತ್ತು O.S.No. 27/1977 ಮತ್ತು RA No.33/1979 ಆದೇಶವನ್ನು ಎತ್ತಿಹಿಡಿದಿರುತ್ತಾರೆ ಎಂದರೆ ಸರಿ. ಸದರಿ ಆದೇಶದ ಮೇರೆಗೆ FDP ಸಲ್ಲಿಸಿದ್ದು, FDP ಯ ನೋಟಿಸ ನಮಗೆ ಬಂದಿರುತ್ತದೆ ಎಂದರೆ ಸರಿ. EP ಯಲ್ಲಿ ನೀಡಿದ ಸ್ವಾಧಿನಕ್ಕೆ ತಕರಾರು ಮಾಡುತ್ತಿರುತ್ತೇನೆ ಎಂದು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. EP ಯಲ್ಲಿ ನೀಡಿದ ಆಸ್ತಿಯನ್ನು ಮಾರಾಟ ಮಾಡಿ ವಾದಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**